**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ವಿದ್ಯಾರಣ್ಯ 583 276**

**ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ**


# ಸಂಶೋಧನಾ ನೀತಿ

**ಪ್ರಸ್ತಾವನೆ**

ಸಂಶೋಧನೆ ಮತ್ತು ಬೋಧನೆಯನ್ನು ಬಹುಮುಖ್ಯವಾಗಿ ವಿಶ್ವವಿದ್ಯಾಲಯಗಳು ಕೈಗೊಳ್ಳಬೇಕೆಂದು 2020ರ ಹೊಸ ಶಿಕ್ಷಣ ನೀತಿಯು ಪ್ರತಿಪಾದಿಸುತ್ತದೆ. ಅದರಂತೆ ಜ್ಞಾನದ ಉತ್ಪಾದನೆಯು ಈಗ ಇಂಗ್ಲಿಷ್ ಭಾಷಾ ಮಾಧ್ಯಮದಲ್ಲಿ ನಡೆಯುತ್ತಿರುವುದು ಮತ್ತು ಅದರ ಸಮಸ್ಯೆಯನ್ನು ಕೂಡ ಹೊಸ ಶಿಕ್ಷಣ ನೀತಿಯಲ್ಲಿ ಉಲ್ಲೇಖಿಸಲಾಗಿದೆ. ಮುಖ್ಯವಾಗಿ ನಮ್ಮ ಜನಸಂಖ್ಯೆಯ ಶೇಕಡಾ 3ರಷ್ಟು ಮಂದಿಗೆ ಮಾತ್ರ ಇಂಗ್ಲಿಷ್ ಭಾಷೆಯ ತಿಳುವಳಿಕೆ ಇರುವುದು ಸ್ಪಷ್ಟವಾಗಿದೆ. ಈ ಜ್ಞಾನವನ್ನು ಸದುಪಯೋಗಪಡಿಸಿಕೊಳ್ಳಲು ಇತರ ಬಹುಸಂಖ್ಯಾತ ಜನರಿಗೆ ಸಾಧ್ಯವಾಗುವುದಿಲ್ಲ. ಭಾರತೀಯ ಸಮಾಜದಲ್ಲಿ ಇಲ್ಲಿಯವರೆಗೆ ಯುರೋಪಿಯನ್ ಅನುಭವದ ಮೇಲೆ ಜ್ಞಾನದ ಉತ್ಪಾದನೆ ನಡೆದಿದೆ. ಹಾಗಾಗುವುದರಿಂದ ಭಾರತೀಯ ಸಂಸ್ಕೃತಿ ಮತ್ತು ತತ್ಸಂಬಂಧೀ ತಿಳುವಳಿಕೆಗಳು ಬಹುಮಟ್ಟಿಗೆ ಮರೆಯಾಗುತ್ತಿವೆ. ಏಕೆಂದರೆ ಜ್ಞಾನದ ಮಾಧ್ಯಮ ಎಂದರೆ ಅದು ಕೇವಲ ಭಾಷೆಯಷ್ಟೇ ಅಲ್ಲ ಅದು ಒಂದು ಯೋಚನಾ ಕ್ರಮವೂ ಆಗಿರುತ್ತದೆ.

ಕನ್ನಡ ವಿಶ್ವವಿದ್ಯಾಲಯವು ಕೇವಲ ಜ್ಞಾನ ಪ್ರಸರಣಕ್ಕೆ ಸೀಮಿತವಾಗಿರದೆ, ಜ್ಞಾನವನ್ನು ಉತ್ಪಾದಿಸುವ ಉದ್ದೇಶದಿಂದ ಸ್ಥಾಪನೆಯಾಗಿದೆ. ಈ ವಿಶ್ವವಿದ್ಯಾಲಯದಲ್ಲಿ ಕೇವಲ ಆಂತರಿಕ ವಿದ್ವಾಂಸರು ಮಾತ್ರವಲ್ಲದೆ ಸಂಶೋಧನೆಯಲ್ಲಿ ಆಸಕ್ತರಾದ ಇತರೆ ಯಾವುದೇ ವಿದ್ವಾಂಸರಿಗೂ ಅವಕಾಶ ಕಲ್ಪಿಸಲಾಗಿದೆ. ಈ ರೀತಿಯ ಉತ್ಪಾದಿತ ಜ್ಞಾನವನ್ನು ಸಮಾಜಕ್ಕೆ ತಲುಪಿಸುವ ಮೂಲಕ ಉತ್ತಮ ಸಮಾಜವನ್ನು ನಿರ್ಮಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಬೋಧನೆಗೆ ಸಂಬಂಧಿಸಿದ ನೀತಿನಿಯಮಗಳು ರಾಷ್ಟ್ರೀಯ ಹೊಸ ಶಿಕ್ಷಣ ನೀತಿ(2020)ಗೆ ಅನುಗುಣವಾಗಿ ಇರುವುದರಿಂದ ಸಂಶೋಧನಾ ನೀತಿಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

## ಉದ್ದೇಶಗಳು

ಈ ಸಂಶೋಧನಾ ನೀತಿಯು ಮುಖ್ಯವಾಗಿ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಶೋಧನಾ ಚಟುವಟಿಕೆಗಳಿಗೆ ಮತ್ತು ಇತರ ಪ್ರಾಯೋಜಿತ ಸಂಶೋಧಕರಿಗೆ ಸೂಕ್ತ ಮಾರ್ಗದರ್ಶನ ನೀಡುವುದಾಗಿದೆ. ಸಂಶೋಧನಾ ನೀತಿಯ ನಿರ್ದಿಷ್ಟ ಉದ್ದೇಶಗಳು ಈ ಕೆಳಕಂಡಂತಿವೆ:

1. ರಾಷ್ಟ್ರೀಯ ಹೊಸ ಶಿಕ್ಷಣ ನೀತಿ(2020)ಗೆ ಅನುಗುಣವಾಗಿ ಬಹುಭಾಷೆ ಮತ್ತು ಬಹುಶಿಸ್ತೀಯ ಅಧ್ಯಯನ ವಿಧಾನವನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳುವುದು.
2. ಹೊಸ ಶಿಕ್ಷಣ ನೀತಿ(2020)ಗೆ ಅನುಗುಣವಾಗಿ ಬೋಧನೆ ಮತ್ತು ಸಂಶೋಧನೆಗೆ ಸಮಾನ ಆದ್ಯತೆ ನೀಡುವುದು.

3. ವಿಶ್ವಜ್ಞಾನವನ್ನು ಕನ್ನಡ ಭಾಷೆಯಲ್ಲಿ ಅಳವಡಿಸುವುದು ಮತ್ತು ಕನ್ನಡದ ಜ್ಞಾನವನ್ನು ವಿಶ್ವಕ್ಕೆ ತಿಳಿಯಪಡಿಸುವುದು.
4. ಮೂಲಜ್ಞಾನಕ್ಕೆ (Innovative knowledge) ಸಂಬಂಧಿಸಿದ ಸಂಶೋಧನೆಗಳನ್ನು ಕೈಗೊಳ್ಳುವುದು.
5. ಸಮಾಜಮುಖೀ ಸಂಶೋಧನೆಗಳನ್ನು ಉತ್ತೇಜಿಸುವುದು.
6. ನಿರ್ಲಕ್ಷಿತವಾದ ಎಲ್ಲಾ ಕ್ಷೇತ್ರಗಳ(ಮಾನವಿಕ, ಸಮಾಜ ವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ) ಅಧ್ಯಯನಗಳನ್ನು ಪ್ರೋತ್ಸಾಹಿಸುವುದು
7. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷೆಯನ್ನು ಆಧುನೀಕರಣಗೊಳಿಸುವುದು.
8. ಭಾರತೀಯ ಸಾಂಪ್ರದಾಯಿಕ ವಿಜ್ಞಾನವೂ ಸೇರಿದಂತೆ ಆಧುನಿಕ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಕ್ಷೇತ್ರಗಳಲ್ಲಿ ಕನ್ನಡದಲ್ಲಿ ಸಂಶೋಧನೆ ಮತ್ತು ಜ್ಞಾನ ಪ್ರಸರಣಕ್ಕೆ ಅವಕಾಶ ಕಲ್ಪಿಸುವುದು.

## ಸಂಶೋಧನೆಗೆ ಉತ್ತೇಜನ

ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯ, ಸಮಾಜವಿಜ್ಞಾನಗಳ ನಿಕಾಯ, ಲಲಿತಕಲೆಗಳ ನಿಕಾಯ ಮತ್ತು ವಿಜ್ಞಾನಗಳ ನಿಕಾಯಗಳಲ್ಲಿ ಆಯಾಯ ಕ್ಷೇತ್ರಗಳಿಗೆ ಸಂಬಂಧಿಸಿದ ಸಂಶೋಧನೆಯನ್ನು ಕೈಗೊಳ್ಳಲು ವಿಭಾಗಗಳು ಸ್ವತಂತ್ರವಾಗಿರುತ್ತವೆ. ಈ ನಿಟ್ಟಿನಲ್ಲಿ ವಿಭಾಗಗಳು ಸಂಶೋಧನೆಗೆ ಸಂಬಂಧಪಟ್ಟಂತೆ ಯಾವುದೇ ಸಂಸ್ಥೆಯಿಂದ ಧನಸಹಾಯ ಪಡೆಯಬಹುದಾಗಿದೆ. ಆದರೆ ಸಂಶೋಧನೆಗಳನ್ನು ಕೈಗೊಳ್ಳುವ ಮೊದಲು ಯೋಜನಾ ಪ್ರಸ್ತಾವಕ್ಕೆ ಆಯಾಯ ವಿಭಾಗಗಳ ಅಧ್ಯಯನ ಮಂಡಳಿ ಸಭೆಯಲ್ಲಿ ಪೂರ್ವಾನುಮತಿಯೊಂದಿಗೆ ವಿಶ್ವವಿದ್ಯಾಲಯದ ಅನುಮೋದನೆ ಪಡೆಯತಕ್ಕದ್ದು. ಹೀಗೆ ಕೈಗೊಂಡ ಸಂಶೋಧನೆಯನ್ನು ಪ್ರಕಟಿಸುವ ಮೊದಲು ಸಂಬಂಧಿಸಿದ ವಿಷಯ ಪರಿಣತರಿಂದ ಮೌಲ್ಯಮಾಪನಕ್ಕೆ ಒಳಪಡಿಸಬೇಕು.

ಕನ್ನಡ ವಿಶ್ವವಿದ್ಯಾಲಯದ ವಿಭಾಗಗಳು ಸ್ಥೂಲವಾಗಿ ಎರಡು ವಿಧದ ಯೋಜನೆಗಳನ್ನು ಕೈಗೊಳ್ಳಬಹುದಾಗಿದೆ.

**1. ಅಲ್ಪಾವಧಿ ಯೋಜನೆ:** ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ಏಕಕಾಲದಲ್ಲಿ ವಿಭಾಗದ ಧೇಯೋದ್ದೇಶಕ್ಕೆ ಅನುಗುಣವಾಗಿ ಮತ್ತು ಅವರ ಪರಿಣತಿ ಕ್ಷೇತ್ರದಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಅವಕಾಶವಿದೆ. ಅಲ್ಪಾವಧಿ ಯೋಜನೆ ಎನ್ನುವುದು ಅಧ್ಯಾಪಕರು ಪರಿಣತರಾಗಿರುವ ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಯೋಜನೆಯಾಗಿರುತ್ತದೆ. ಇದರ ಅವಧಿ ಒಂದರಿಂದ ಎರಡು ವರ್ಷಗಳು.

**2. ದೀರ್ಘಾವಧಿ ಯೋಜನೆ :** ಇದು ವಿಭಾಗದ ಒಟ್ಟಾರೆ ಧ್ಯೇಯೋದ್ದೇಶವನ್ನು ಗಮನದಲ್ಲಿರಿಸಿಕೊಂಡು ರೂಪಿಸುವ ದೀರ್ಘಕಾಲೀನ ಯೋಜನೆಯಾಗಿರುತ್ತದೆ. ಇಂತಹ ಯೋಜನೆಗಳನ್ನು ವಿಭಾಗದ ಸದಸ್ಯರು ಮತ್ತು ಬಾಹ್ಯ ವಿದ್ವಾಂಸರು ಸೇರಿಕೊಂಡು ರೂಪಿಸಬಹುದಾಗಿರುತ್ತದೆ. ಎರಡು ವರ್ಷದಿಂದ ಐದು ವರ್ಷಗಳು.

**ಬಹುಶಿಸ್ತೀಯ ಸಂಶೋಧನೆ**

2020ರ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯಲ್ಲಿ ಬಹುಶಿಸ್ತೀಯ ಸಂಶೋಧನೆಯನ್ನು ಮಾರ್ಗದರ್ಶಿ ಸೂತ್ರವಾಗಿ ಹೇಳಲಾಗಿದೆ. ಆದುದರಿಂದ ಮಾನವಿಕ, ಸಮಾಜವಿಜ್ಞಾನ, ಲಲಿತಕಲೆ ಮತ್ತು ವಿಜ್ಞಾನ ಎನ್ನುವ ಜ್ಞಾನಕ್ಷೇತ್ರಗಳ ಗೋಡೆಗಳನ್ನು ಮೀರಿ ಸಂಶೋಧನೆಗಳನ್ನು ಕೈಗೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ. ಈ ದೃಷ್ಟಿಯಿಂದ ವಿಶ್ವವಿದ್ಯಾಲಯದಲ್ಲಿ ಈ ಕೆಳಗಿನಂತೆ ಸಂಶೋಧನೆ ಕೈಗೊಳ್ಳಬಹುದಾಗಿದೆ

1. ವಿಶ್ವವಿದ್ಯಾಲಯದ ನಾಲ್ಕೂ ನಿಕಾಯಗಳು ಒಟ್ಟಾಗಿ ಇಂತಹ ಯೋಜನೆಗಳನ್ನು ರೂಪಿಸಬಹುದಾಗಿದೆ.
2. ಬಹುಶಿಸ್ತೀಯ ಸಂಶೋಧನೆಯ ವಿಧಾನ ಮತ್ತು ತಾತ್ವಿಕತೆಯನ್ನು ಸ್ಪಷ್ಟಪಡಿಸಿಕೊಳ್ಳುವುದು
3. ಬಹುಶಿಸ್ತೀಯ ಅಧ್ಯಯನಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹ(Data base) ಮಾಡುವುದು
4. ಬಹುಶಿಸ್ತೀಯ ಅಧ್ಯಯನಗಳಲ್ಲಿ ಈವರೆಗೆ ನಡೆದಿರುವ ಅಧ್ಯಯನಗಳನ್ನು ಸಮಕಾಲೀನಗೊಳಿಸುವುದು (update).
5. ಬಹುಶಿಸ್ತೀಯ ಅಧ್ಯಯನಗಳಿಗೆ ಬೌದ್ಧಿಕ ಮತ್ತು ಭೌತಿಕ ವಾತಾವರಣವನ್ನು ಸೃಷ್ಟಿಸುವುದು.

**ಶೈಕ್ಷಣಿಕ ಕಾರ್ಯಕ್ರಮಗಳು**

1. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ(2020) ಮಾರ್ಗಸೂಚಿಯಂತೆ ಸ್ನಾತಕ, ಸ್ನಾತಕೋತ್ತರ ಮತ್ತು ತತ್ಸಂಬಂಧಿ ಪದವಿಗಳು
2. ಪಿಎಚ್.ಡಿ. (Ph.D.), ಪೋಸ್ಟ್ ಡಾಕ್ಟೊರಲ್ ಮತ್ತು ಗೌರವ ಡಾಕ್ಟೊರೇಟ್(ನಾಡೋಜ) ಪದವಿಗಳು
3. ಡಿ.ಲಿಟ್ (D.Litt) ಪದವಿ

## ಮೂಲ ಜ್ಞಾನದ ಹುಡುಕಾಟ

ಸಾಮಾನ್ಯವಾಗಿ ಉನ್ನತ ಮಟ್ಟದ ಶೈಕ್ಷಣಿಕ ಸಂಸ್ಥೆಗಳಲ್ಲಿ ಜ್ಞಾನವೆನ್ನುವುದು ಇಂದು ಆನ್ವಯಿಕತೆಗೆ (application) ಮಾತ್ರವೇ ಸೀಮಿತವಾಗಿದ್ದು ಸಿದ್ಧಾಂತಗಳು, ದೃಷ್ಟಿಕೋನಗಳು ಪಾಶ್ಚಾತ್ಯ ತಿಳುವಳಿಕೆಯ ಮೂಲಕ ಭಾರತಿಯ ವಿಶ್ವವಿದ್ಯಾಲಯಗಳನ್ನು ತಲುಪುತ್ತಿವೆ. ಹಾಗಾಗುವುದರಿಂದ ಬಹುತೇಕ ಭಾರತೀಯ ವಿಶ್ವವಿದ್ಯಾಲಯಗಳು ಪಾಶ್ಚಾತ್ಯ ಸಿದ್ಧಾಂತಗಳ ಪ್ರಯೋಗಶಾಲೆಗಳಾಗಿವೆ. ಮಾತೃಭಾಷೆಯಲ್ಲಿ ಜ್ಞಾನದ ಪ್ರಸರಣ ಎಂದರೆ ಸ್ವತಂತ್ರವಾಗಿ ಯೋಚನೆ ಮಾಡಲು ಉತ್ತೇಜಿಸುವುದು ಎಂದರ್ಥ. ಆದುದರಿಂದಲೇ ಕನ್ನಡ ವಿಶ್ವವಿದ್ಯಾಲಯವು ಜ್ಞಾನವನ್ನು ಪಸರಿಸುವ ಮಾತ್ರವಲ್ಲದೆ ಜ್ಞಾನವನ್ನು ಉತ್ಪಾದಿಸುವ ಸಂಸ್ಥೆಯೂ ಆಗಿದೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಹೊಸ ಮತ್ತು ಮೂಲ(Innovative) ಜ್ಞಾನವನ್ನು ಹುಡುಕಲು ಪ್ರಯತ್ನಿಸುತ್ತದೆ.

1. ವಿಶ್ವವಿದ್ಯಾಲಯವು ಕಲೆ, ವಾಸ್ತುಶಾಸ್ತ್ರ, ಮೂರ್ತಿಶಿಲ್ಪ, ಚಿತ್ರಕಲೆ, ಪ್ರತಿಮಾಶಾಸ್ತ್ರ, ಶಾಸನಶಾಸ್ತ್ರ, ನಾಟಕ, ನಾಟ್ಯಕಲೆ, ಸಂಗೀತ, ಬುಡಕಟ್ಟು ಕಲೆ, ಭಾಷೆ, ವಿಮರ್ಶೆ, ಧರ್ಮ, ಸಂಸ್ಕೃತಿ, ವೇದಾಂತ, ಶಾಕ್ತ, ನಾಥ, ಸೂಫಿ, ಶೈವ, ವೀರಶೈವ ಮತ್ತು ಇತರೆ ಸ್ಥಳೀಯ ಸಂಸ್ಕೃತಿಗಳು.
2. ಭಾರತೀಯ ಜ್ಞಾನವ್ಯವಸ್ಥೆಯ ಹುಡುಕಾಟ ಮತ್ತು ಪ್ರಚಲಿತ ಸಮಸ್ಯೆಗಳಿಗೆ ಮುಖಾಮುಖಿ.
3. ಭಾಷೆ, ಲಿಂಗ ಮತ್ತು ಧರ್ಮವನ್ನು ಹೊರತುಪಡಿಸಿ ಅಂಚಿನಲ್ಲಿರುವ ಸಮುದಾಯಗಳಿಗೆ ಪ್ರೋತ್ಸಾಹ.
4. ಮಾನವಿಕ, ಸಮಾಜವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಆಳವಾದ ಸಂಶೋಧನೆ ಮತ್ತು ಕನ್ನಡ ಭಾಷೆಯಲ್ಲಿ ಈ ತಿಳುವಳಿಕೆಯನ್ನು ಅಭಿವೃದ್ಧಿಪಡಿಸುವುದು.

**ಪ್ರಕಟಣೆ**

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಬೋಧನೆ ಮತ್ತು ಸಂಶೋಧನೆಗಳ ಫಲಿತವಾಗಿ ರೂಪಿಸಿದ ಗ್ರಂಥಗಳನ್ನು ನಿಯಮಾನುಸಾರ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟ ಮಾಡಬಹುದಾಗಿದೆ. ಈ ನಿಯಮಗಳು ಕೃತಿಗಳನ್ನು ಪ್ರಕಟಿಸಲು ಅನುಸರಿಸಬೇಕಾದ ನಿಯಮವನ್ನು ನಿರ್ದಿಷ್ಟಪಡಿಸುತ್ತದೆ. ಪ್ರಸಾರಾಂಗವು ಈ ಉದ್ದೇಶಕ್ಕಾಗಿ ತನ್ನದೇ ಆದ ಮಾರಾಟ ವಿಭಾಗವನ್ನು ಹೊಂದಿದೆ.

## ಅಧ್ಯಯನ ಪೀಠ, ದತ್ತಿನಿಧಿ ಮತ್ತು ಅಧ್ಯಯನ ಕೇಂದ್ರಗಳು

ವಿಶ್ವವಿದ್ಯಾಲಯದಲ್ಲಿ ನಿಯೋಜನೆಗೊಂಡ ಅಧ್ಯಾಪಕರು ಮಾತ್ರವಲ್ಲದೇ, ಇತರೆ ಕ್ಷೇತ್ರಗಳಲ್ಲಿ ಪರಿಣತರಾದ ವಿದ್ವಾಂಸರಿಗೂ ಅವಕಾಶ ಕಲ್ಪಿಸುವ ನೆಲೆಯಲ್ಲಿ ಸರ್ಕಾರ ಮತ್ತು ಖಾಸಗಿ ವಲಯಗಳ ಆರ್ಥಿಕ ನೆರವಿನಿಂದ ಅಧ್ಯಯನ ಪೀಠ, ದತ್ತಿನಿಧಿ ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ ದತ್ತ ಅಧಿಕಾರವನ್ನು ಪಡೆದಿರುತ್ತದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಹದಿಮೂರು ಅಧ್ಯಯನ ಪೀಠಗಳು, ಹದಿನೈದು ದತ್ತಿನಿಧಿಗಳು ಮತ್ತು ಮೂರು ಅಧ್ಯಯನ ಕೇಂದ್ರಗಳು ಸ್ಥಾಪನೆಯಾಗಿವೆ. ಸಂಬಂಧಿತ ಕ್ಷೇತ್ರದಲ್ಲಿ ವಿಶೇಷ ಪರಿಣತಿ ಇರುವ ಅಧ್ಯಾಪಕರನ್ನು ಅವುಗಳಿಗೆ ಅಧ್ಯಕ್ಷ, ಸಂಯೋಜನಾಧಿಕಾರಿಗಳನ್ನಾಗಿ ನೇಮಿಸಲಾಗುತ್ತದೆ. ಇವುಗಳ ಮೂಲಕ ಸಂಬಂಧಿಸಿದ ಜ್ಞಾನಕ್ಷೇತ್ರಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಶೈಕ್ಷಣಿಕ ಸಮಗ್ರತೆ ಕಾಪಾಡಲು ಅವಶ್ಯವಿರುವ ಮಾರ್ಪಾಟುಗಳೊಂದಿಗೆ, ವಿಶ್ವವಿದ್ಯಾಲಯ ಧನಸಹಾಯ ಆಯೋಗ (2017), ರಾಷ್ಟ್ರೀಯ ಹೊಸ ಶಿಕ್ಷಣ ನೀತಿ(2020), ಸರ್ಕಾರ ಮತ್ತು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ರೂಪಿಸುವ ನೀತಿನಿಯಮಗಳಿಗೆ ಒಳಪಟ್ಟು ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಕೈಗೊಳ್ಳಲು ಈ ಮೂಲಕ ಅವಕಾಶ ಕಲ್ಪಿಸಲಾಗಿದೆ.

**ಸಿದ್ಧಪಡಿಸಿದವರು**

**ಡಾ. ಮಾಧವ ಪೆರಾಜೆ,** ಪ್ರಾಧ್ಯಾಪಕರು ಮತ್ತು ಡೀನ್, ವಿಜ್ಞಾನಗಳ ನಿಕಾಯ, ಕವಿಹಂ

**ಡಾ.ಎಸ್.ವೈ. ಸೋಮಶೇಖರ್,** ಸಹ ಪ್ರಾಧ್ಯಾಪಕರು ಮತ್ತು ಉಪಕುಲಸಚಿವರು, ಶೈಕ್ಷಣಿಕ, ಕವಿಹಂ